ಅ) ಬಂದಿದ್ದಲ್ಲಿ ಅದನ್ನು ಯಾವಾಗ ಸರಕಾರದವರು ಮಂಜೂರಾತಿ ನೀಡುವರು ಮತ್ತು ಅದಕ್ಕೆ ತಗಲಬಹುದಾದ ವೆಚ್ಚವೆಷ್ಟು?

ಇ) ಈ ಕಾರ್ಖಾನೆಗೆ ಡಿಪ್ಪಿಲರಿ ಮಂಜೂರಾತಿ ಮಾಡುವ ಬಗ್ಗೆ ಸರಕಾರದ ನಿಲುವೇನು?

ಶ್ರೀ ಕೆ. ಶಿವಮೂರ್ತಿ, (ಅಬಕಾರಿ ರಾಜ್ಯ ಸಚಿವರು) :

ಅ) ಹೌದು.

ಆ) ರಾಜ್ಯದಲ್ಲಿ ಕಾಕಂಬಿ ದೊರೆಯುವಿಕೆಯು ತೃಪ್ತಿದಾಯಕವಾಗಿಲ್ಲದಿರುವುದರಿಂದ ಮನವಿಯನ್ನು ತಿರಸ್ಕರಿಸಲಾಗಿದೆ. ಆದುದರಿಂದ ವೆಚ್ಚದ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಕಾಕಂಬಿಯ ಲಭ್ಯತೆ, ವಿನಿಯೋಗದ ಬಗ್ಗೆ ಪರಿಶೀಲಿಸಿ ವರದಿ ಮಾಡಲು ಒಂದು ಉನ್ನತ ಮಟ್ಟದ ಸಮಿತಿಯು ಸರ್ಕಾರದಿಂದ ರಚಿಸಲ್ಪಟ್ಟಿದೆ. ಅದರ ವರದಿ ಬಂದ ನಂತರ ಈ ಬಗ್ಗೆ ಸರ್ಕಾರದ ಸಿದ್ಧಾಂತವು ನಿರ್ಣಯಿಸಲ್ಪಡುವುದು.

ಏತ ನೀರಾವರಿ ಪ್ರಾರಂಭಿಸುವ ಬಗ್ಗೆ.

557 – ಶ್ರೀ ಎಂ.ಪಿ. ಕೇಶವಮೂರ್ತಿ (ಆನೇಕಲ್) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ಜಿಲ್ಲೆಯ ಆನೇಕಲ್ ತಾಲ್ಲೂಕು ಜಿಗಣಿ ಹೋಬಳಿ ಬೊಮ್ಮಂಡಹಳ್ಳಿ ಬಳಿ ಏತ ನೀರಾವರಿ ಆರಂಭಿಸಲುಸರ್ಕಾರದವರ ಯೋಜನೆಯಲ್ಲಿದೆಯೇ?

ಆ) ಹಾಗಿದ್ದಲ್ಲಿ, ಅದನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಕೆ.ಎಸ್. ಮಲ್ಲಿಕಾರ್ಜುವ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) ಇಲ್ಲ.

ಆ) ಅನ್ವಯಿಸುವುದಿಲ್ಲ.

ಏತ ನೀರಾವರಿ ಕೆಲಸದ ಬಗ್ಗೆ.

556 – ಶ್ರೀ ಎಂ.ಪಿ. ಕೇಶವಮೂರ್ತಿ (ಆನೇಕಲ್) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ಜಿಲ್ಲೆಯ ಮಾದಪ್ಪನಹಳ್ಳಿಯಲ್ಲಿರುವ ಏತ ನೀರಾವರಿ ಕೆಲಸ ಸಮರ್ಪಕವಾಗಿ ನಡೆಯುತ್ತಿದೆಯೇ?

ಆ) ಹಾಗಿಲ್ಲದಿದ್ದಲ್ಲಿ, ಈ ಕಾರ್ಯವನ್ನು ಅಭಿವೃದ್ಧಗೊಳಿಸಲು ಸರ್ಕಾರದವರು ಯೋಚಿಸಿದ್ದಾರೆಯೇ?

ಇ) ಅಬಿವೃದ್ಧಿ ಕಾರ್ಯವನ್ನು ತ್ವರಿತಗೊಳಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ಸಚಿವರು)

ಅ) ಹೌದು.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಸಮಾಜ ಕಲ್ಯಾಣ ಸಲಹಾ ಮಂಡಳಿಯ ಬಗ್ಗೆ.

144 – ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕೆಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?